ನೂತನ ಮಂತ್ರಿಮಂಡಲದ ಸಚಿವರ ಪರಿಚಯ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿ ಪಡೆದು ನನ್ನ ಮಂತ್ರಿಮಂಡಲಕ್ಕೆ ಹೊಸದಾಗಿ ಸೇರ್ಪಡೆಯಾಗಿರತಕ್ಕ ಮಾನ್ಯ ಸಚಿವರನ್ನು ಪರಿಚಯ ಮಾಡಿಕೊಡುತ್ತಿದ್ದೇನೆ. ಮೊದಲು ಸಂಪುಟ ದರ್ಜೆಯ ಸಚಿವರನ್ನು ಪರಿಚಯ ಮಾಡಿ ಕೊಡುತ್ತೇನೆ. ಶ್ರೀ ಧರ್ಮಸಿಂಗ್‌ರವರಿಗೆ ಗೃಹ ಖಾತೆ (ಜಾಗೃತ ದಳ ಬಿಟ್ಟು)ಯನ್ನು ವಹಿಸ ಲಾಗಿದೆ. ಶ್ರೀ ಟಿ. ಎಸ್. ನರಸಿಂಹಮೂರ್ತಿಯವರು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳಾಗಿದ್ದಾರೆ. ಶ್ರೀ ಬಿ. ಶಿವಣ್ಣನವರು, ಕಾನೂನು ಹಾಗೂ ಸಮಾಜ ಕಲ್ಯಾಣ ಮಂತ್ರಿ ಗಳಾಗಿದ್ದಾರೆ. ಶ್ರೀ ಕೆ. ಜೆ ಜಾರ್ಜ್ ಅವರು ವಸತಿ ಮತ್ತು ನಗರಾಭಿವೃದ್ಧಿ ಖಾತೆ ವಹಿಸಿ ಕೊಂಡಿದ್ದಾರೆ. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಅವರು ಕಂದಾಯ ಖಾತೆ ವಹಿಸಿಕೊಂಡಿದ್ದಾರೆ. ಈಗ ರಾಜ್ಯ ಸಚಿವರನ್ನು ಪರಿಚಯಿಸುತ್ತೇನೆ. ಶ್ರೀ ಕೆ. ಶಿವಮೂರ್ತಿಯವರಿಗೆ ಅಬಕಾರಿ, ಶ್ರೀ ಮಲ್ಲಿಕಾರ್ಜುನ ಪ್ರಸನ್ನ ಅವರಿಗೆ ಸಣ್ಣ ನೀರಾವರಿ, ಶ್ರೀ ಮುನಿಯಪ್ಪನವರಿಗೆ ರೇಷ್ಮೆ, ಶ್ರೀ ಎಸ್. ರಮೇಶ್‌ರವರಿಗೆ ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ, ಶ್ರೀ ನಜೀರ್ ಅಹಮದ್‌ರವರಿಗೆ ಸಣ್ಣ ಕೈಗಾರಿಕೆ, ಶ್ರೀ ಇ. ಟಿ. ಶಂಭುನಾಥ್‌ರವರಿಗೆ ಅರಣ್ಯ, ಶ್ರೀ ಎ. ಎಸ್. ನಾಡಗೌಡ ಅವರಿಗೆ ಕಾರ್ಮಿಕ, ಶ್ರೀ ಉಸ್ತಾದ್ ಅವರಿಗೆ ಗಣಿ ಮತ್ತು ಭೂವಿಜ್ಞಾನ ಖಾತೆಗಳನ್ನು ವಹಿಸಿಕೊಡಲಾಗಿದೆ. ಇಷ್ಟು ವಿಚಾರಗಳನ್ನು ತಮಗೆ ತಿಳಿಸಿ, ಇನ್ನು ಕೆಲವು ಪತ್ರಿಕೆಗಳಲ್ಲಿ ಏನು ಬಂದಿದೆ ಎಂದು ಹೇಳಿದ್ದಾರೆ ಅದು ದಯವಿಟ್ಟು ಹೇಗೆ ಬಂತು ಎಂಬುದನ್ನು ಪತ್ರಿಕೆಯವರಿಗೇ ಕೇಳಿದರೆ ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು.

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರವನ್ನು ನಾಳೆಗೆ ಹಾಕಿಕೊಂಡರೆ ಒಳ್ಳೆಯದು. ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಇನ್ನೂ ಹೆಚ್ಚಿನ ವಿವರಗಳು ಬೇಕಾಗಿದೆ. ತಮ್ಮ ಅಪ್ಪಣೆ ಮತ್ತು ಮಾನ್ಯ ಸದಸ್ಯರ ಅಪ್ಪಣೆ ಪಡೆದು ಇದನ್ನು ದಯವಿಟ್ಟು ಮುಂದಿನ ವಾರ ತೆಗೆದುಕೊಳ್ಳಿ ಎಂದು ವಿನಂತಿಸು ತ್ತೇನೆ. ಇದಕ್ಕೆ ಸ್ವಲ್ಪ ಸಮಯ ಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಬಿಎಸಿ ಮೀಟಿಂಗ್‌ನಲ್ಲಿ ನಡೆದಂತಹ ವಿಚಾರ ಹಾಗೂ ಕಳೆದ ಅಧಿವೇಶನದಲ್ಲಿ ನಡೆದ ಘಟನೆಯ ಬಗ್ಗೆ ರೆಕಾರ್ಡ್ಸ್ ಅನ್ನು ಸೆಟ್ ರೈಟ್ ಮಾಡುತ್ತೇನೆಂದು ತಾವು ಹೇಳಿದ್ದಿರಿ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೂ ಕೂಡ ರೆಕಾರ್ಡ್ಸ್‌ನಲ್ಲಿ ಹೋದರೆ ಒಳ್ಳೆಯದೆಂದು ಅನ್ನಿಸುತ್ತದೆ.

ಪ್ರಕಟಣೆ

ಸದಸ್ಯರುಗಳು ಸದನದಲ್ಲಿ ಭಾಗವಹಿಸುವ ಬಗ್ಗೆ

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಕಳೆದ ಒಂದು ದಿವಸದ ಅಧಿವೇಶನದಲ್ಲಿ ನಡೆದಂತಹ ಕೆಲವು ಅಪ್ರಿಯ ಘಟನೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರ ವಿರೋಧಿ ಪಕ್ಷಗಳ ಧುರೀಣರು ಸದನದ ಕಾರ್ಯಕಲಾಪಗಳ ಸಮಿತಿ ಸಭೆ ನಡೆದಂತಹ ಸಂದರ್ಭದಲ್ಲಿ ಇದರ ಬಗ್ಗೆ ಸಮಗ್ರವಾಗಿ ವಿಚಾರ ವಿನಿಮಯ ಮಾಡಿದ್ದಾರೆ ಆ ವಿಚಾರ ವಿನಿಮಯದ ಪ್ರಧಾನವಾದಂತಹ ಉದ್ದೇಶ ಏನು ಎಂದು ಹೇಳಿದರೆ ಇನ್ನು ಮುಂದೆ ಅಂತಹ ಅಪ್ರಿಯ ಘಟನೆಗಳು ನಡೆಯಬಾರದು. ಸದನದ ಗೌರವಕ್ಕೆ ಸದನದ ಗಾಂಭೀರ್ಯಕ್ಕೆ ಕಳಂಕ ತರತಕ್ಕಂತಹ ಯಾವುದೇ ವಿಧವಾದಂತಹ ಸನ್ನಿವೇಶಗಳು ಮರುಕಳಿಸದ ರೀತಿಯಲ್ಲಿ ಎಲ್ಲಾ ಪಕ್ಷದ ಧುರೀಣರುಗಳು ಕೂಡ ಅಧ್ಯಕ್ಷರ ಜೊತೆಯಲ್ಲಿ ಸಹಕರಿಸತಕ್ಕಂಥಾದ್ದು, ಮತ್ತು ಸದನದ ಸಂಪೂರ್ಣ ನಿಯಂತ್ರಣವನ್ನು ಮಾಡತಕ್ಕಂತಹ ಜವಾಬ್ದಾರಿಯನ್ನು ಅಧ್ಯಕ್ಷರಿಗೆ ವಹಿಸಿರುವುದರಿಂದ ಅಧ್ಯಕ್ಷರು ಏನು ತೀರ್ಮಾನ ಕೊಡುತ್ತಾರೆ. ಆ ತೀರ್ಮಾನಕ್ಕೆ ತಲೆಬಾಗಿ ಈ ಸದನದ ಕಾರ್ಯಕ್ರಮಗಳು ಸುಲಲಿತವಾಗಿ ನಡೆಯುವುದಕ್ಕೆ ಎಲ್ಲಾ ಪಕ್ಷದವರು ಮುಖ್ಯಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಒಪ್ಪಿದ್ದಾರೆ. ಆ ದೃಷ್ಟಿಯಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸ್ನೇಹಿತರುಗಳು ಈ ಸದನದ ಕಾರ್ಯಕಲಾಪಗಳಿಗೆ ಬಹಿಷ್ಕಾರ ಏನು ಮಾಡಬೇಕೆಂದು ಉದ್ದೇಶಿಸಿದ್ದರು, ಅದನ್ನು ತಳ್ಳಿಹಾಕಿ ಈ ವಿಚಾರ ವಿನಿಮಯದಿಂದ ತೃಪ್ತಿ ಹೊಂದಿ ಅವರುಗಳೆಲ್ಲರೂ ಸದನಕ್ಕೆ ಬಂದಿರತಕ್ಕಂಥಾದ್ದು, ಸ್ವಾಗತಾರ್ಹವಾದಂತಹ ಬೆಳವಣಿಗೆಯೆಂದು ನಾನು ಭಾವನೆ ಮಾಡುತ್ತೇನೆ. ಈ ಸಭೆ ಈ ಸದನ

ಕರ್ನಾಟಕದ ಜನ ಕೋಟಿಯ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ತನ್ನ ಸಕ್ರೀಯ ಪಾತ್ರವನ್ನು ರಾಜ್ಯಾಂಗದ ಚೌಕಟ್ಟು, ಹಾಗೂ ನಾವೇ ನಿರ್ಮಿಸಿಕೊಂಡಿರತಕ್ಕಂತಹ ರೂಲ್ಸ್‌ಗಳ ಚೌಕಟ್ಟಿನಲ್ಲಿ ಸುಲಲಿತವಾಗಿ ನಮ್ಮ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗಬೇಕು ಎನ್ನತಕ್ಕಂಥಾದ್ದು ಒಂದು. ಎರಡನೆಯದಾಗಿ ಹೇಳುವುದಾದರೆ ಈ ಸದನದಲ್ಲಿ ಭಾವೋದ್ವೇಗಗಳನ್ನು ಇನ್ನೂ ಹೆಚ್ಚು ಮಾಡತಕ್ಕಂತ ನಮ್ಮ ಭಾಷಣಗಳಲ್ಲಿ ವೈಯಕ್ತಿಕ ನಿಂದನೆಯನ್ನು ಮಾಡುವುದನ್ನು ತಪ್ಪಿಸಬಹುದಂ, ಇದು ಆದರೆ ಈ ಸಭೆಯು ಜಿಡ್ಡು ದಾರಿ ಹಿಡಿಯುವುದನ್ನು ತಪ್ಪಿಸಿದಂತಾಗುತ್ತದೆ. ಆ ದೃಷ್ಟಿಯಿಂದಲೂ ಕೂಡ ಮಾನ್ಯ ಸದಸ್ಯರು ಆ ಕಡೆ ಮತ್ತು ಈ ಕಡೆಯ ಸದಸ್ಯರು ಇದನ್ನು ಗೈಡಿಂಗ್ ಪ್ರಿನ್ಸಿಪಲ್ ಆಗಿ ಇಟ್ಟು ಕೊಂಡು ಇನ್ನು ಮುಂದೆ ಈ ಸದನದ ಕಾರ್ಯಕ್ರಮಗಳಲ್ಲಿ ಕಾರ್ಯಕಲಾಪಗಳಲ್ಲಿ ನನ್ನ ಜೊತೆಯಲ್ಲಿ ಸಹಕರಿಸಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಮೈಸೂರು ತಂಬಾಕು ಕಂಪನಿಯ ಆಸ್ತಿಗೆ ಹಾನಿಯುಂಟಾಗಿರುವುದು.

೫೩. ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಮಲ್ಲಿನಾಥಪುರ ಗ್ರಾಮದಲ್ಲಿದ್ದ ಮೈಸೂರು ಟೊಬ್ಯಾಕೋ ಕಂಪನಿಯ ಗೋದಾಮು ಕಛೇರಿ ಕಟ್ಟಡಗಳಿದ್ದ ಹಾಗೂ ಕಂಪನಿಗೆ ಸೇರಿದ್ದ ಇತರೆ ವಸ್ತುಗಳನ್ನು ಅಕ್ರಮವಾಗಿ ಕೆಲವರು ತೆಗೆದುಕೊಂಡು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಕಟ್ಟಡದಲ್ಲಿದ್ದ ಕಲ್ಲಾರು ಶೀಟು, ಕಬ್ಬಿಣದ ಟ್ರೆಸನ್‌ಗಳು, ತಳಕ್ಕೆ ಹಾಸಿದ್ದ ಕಡಪ ಕಲ್ಲು ಆಡಿಪಾಯದ ಸೈಜು ಕಲ್ಲುಗಳನ್ನು ಸಹಿತವಾಗಿ ಸುಮಾರು ಲಕ್ಷಾಂತರ ರೂಪಾಯಿಗಳು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಆಸ್ತಿಗೆ ಹಾನಿಯಾಗಿದ್ದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಬಂದಿರುತ್ತದೆ.

ಆ) ಈ ಬಗ್ಗೆ ಮೈಸೂರು ಟೊಬ್ಯಾಕೋ ಕಂಪನಿಯು ಕೋಣನೂರಿನ ಪೋಲೀಸ್ ಠಾಣೆಯಲ್ಲಿ ಫಿರ್ಯಾದಿಯೊಂದನ್ನು ಸಲ್ಲಿಸಿದ್ದು ತಪಾಸಣೆ ಮಾಡಲಾಗುತ್ತಿದೆ.

ಶ್ರೀ ಎ.ಟಿ. ರಾಮಸ್ವಾಮಿ.—ಮೈಸೂರು ಟೊಬ್ಯಾಕೋ ಕಂಪನಿಯ ಗೋಡೌನ್‌ನಲ್ಲಿ ಹಾಗೂ ಆಫೀಸು ಕಟ್ಟಡಗಳಲ್ಲಿ ಕಲ್ಲಾರು ಶೀಟು, ಐರನ್ ಟ್ರೆಸನ್‌ಗಳನ್ನು ಹಾಗೂ ಕಡಪಾ ಕಲ್ಲುಗಳನ್ನು ಏನು ಹಾಕಿದ್ದೀರಿ ಇವುಗಳು ಯಾವ ಸೈಜಿಂಗಳು ಇವುಗಳು ಯಾವಾಗ ಕಳವಾಗಿವೆ ಈ ಕಟ್ಟಡದ ವಿಸ್ತೀರ್ಣ ವೆಷ್ಟು ಹಾಗೂ ಎಷ್ಟು ಆಸ್ತಿಯ ಮೊಬಲಗು ಕಳವಾಗಿದೆ ಎಂಬುದನ್ನು ಮತ್ತು ಎಷ್ಟು ಜನರ ಮೇಲೆ ಯಾವಾಗ ಫಿರ್ಯಾದನ್ನು ದಾಖಲು ಮಾಡಿದ್ದೀರಿ.?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕಂಥಾದ್ದು ಸತ್ಯವಾಗಿದೆ. ಹಾಸನ ಜಿಲ್ಲೆ ಅರಕಲಗೂಡು, ತಾಲ್ಲೂಕಿನಲ್ಲಿ ಮಲ್ಲಿನಾಥಪುರ ಗ್ರಾಮದ ಟೊಬ್ಯಾಕೊ ಕಂಪನಿಯಲ್ಲಿರತಕ್ಕಂತ ಗೋಡೌನ್‌ನಲ್ಲಿ ಹಾಗೂ ಆಫೀಸು ಕಟ್ಟಡದಲ್ಲಿ ಏನು ಮಟೀರಿಯಲ್ಸ್ ಇತ್ತು ಅದನ್ನು ಕಾನೂನು ಬಾಹಿರವಾಗಿ ತೆಗೆದುಕೊಂಡು ಹೋಗಿದ್ದಾರೆಂಬ ವಿಚಾರ ಏನು ಇದೆ. ಅದು ಸತ್ಯವಾಗಿದೆ. ಈ ವಿಚಾರದಲ್ಲಿ ಕೋಣ ನೂರು ಪೋಲೀಸ್‌ಸ್ಟೇಶನ್‌ನಲ್ಲಿ ಮೈಸೂರು ಟೊಬ್ಯಾಕೋ ಕಂಪನಿಯವರು ಈಗಾಗಲೇ ಕಂಪ್ಲೇಂಟ್ ಮಾಡಿದ್ದಾರೆ. ತನಿಖೆಯನ್ನು ಪೋಲೀಸ್‌ಇಲಾಖೆ ಮಾಡುತ್ತಿದೆ ಪೋಲೀಸ್ ಇಲಾಖೆಯ ತನಿಖೆ ಅಪೂರ್ಣವಾಗಿರುವುದರಿಂದ ಈಗಲೇ ವಿವರ ಕೊಡುವುದು ಸರಿಯಲ್ಲವೆನ್ನುವುದನ್ನು ಮಾನ್ಯಸದಸ್ಯರು ಅರಿತಿದ್ದಾರೆಂದು ನಾನು ಭಾವಿಸುತ್ತೇನೆ ತನಿಖೆಗೆ ಅಡ್ಡಿ ಬರುವ ರೀತಿಯಲ್ಲಿ ನಾವು ಹೇಳುವುದು ಬೇಡ. ಅದು ನಾಳೆ ಪತ್ರಿಕೆಗಳಲ್ಲಿ ಬರುತ್ತದೆ. ತನಿಖೆಯನ್ನು ಸಂಪೂರ್ಣವಾಗಿ ಮಾಡಿಸೋಣ ಯಾರು ತಪ್ಪಿತಸ್ಥರು ಇದ್ದಾರೆನ್ನುವ ವಿಚಾರವನ್ನು ನೋಡಿಕೊಂಡು ಅವರ ಮೇಲೆ ಸೂಕ್ತಕ್ರಮವನ್ನು ತೆಗೆದುಕೊಳ್ಳೋಣ.